# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ

## ಕರ್ನಾಟಕ ಸರ್ಕಾರ

ಸಂಖ್ಯೆ : ಕ.ಕೆಸಂ.ಅ.ಪ್ರಾ/ಬೆಂ/LDM/124/ರಿ.ಅ.ಸಂ:38401/2014/2020-21/686 ದಿನಾಂಕ : 07.09.2022 09

## ಅಧಿಸೂಚನೆ

ವಿಷಯ : ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ರಂತೆ ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಪರ್ಧಿನಲ್ಲಿರುವ ಕೆರೆಗಳಿಗೆ "ಹೆಸರಿಸಲಾದ ಅಧಿಕಾರಿಗಳನ್ನು" (Designated Officers) ನೇಮಿಸುವ ಬಗ್ಗೆ.

ಉಲ್ಲೇಖ
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 19 ಶಾಸನ 2014 ಬೆಂಗಳೂರು, ದಿನಾಂಕ: 06.09.2014.
2. ಈ ಕಛೇರಿ ಅಧಿಸೂಚನೆ ಸಂಖ್ಯೆ: ಕಕೆಸಂಅಪ್ರಾ/ನಿ/07/2018-19 ದಿನಾಂಕ : 24.07.2018.
3. ಸರ್ಕಾರದ ಆದೇಶ ಸಂಖ್ಯೆ: ನಅಇ 39 ಬೆಂಅಸೇ 2019 ಬೆಂಗಳೂರು, ದಿನಾಂಕ : 11/12/2019.
4. ಈ ಕಛೇರಿ ಪತ್ರ ಸಂಖ್ಯೆ : ಕಕೆಸಂಅಪ್ರಾ/ನಿ/07/2018-19 ದಿನಾಂಕ : 05.08.2022.
5. ಅಭಿಯಂತರ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಪತ್ರ ಸಂಖ್ಯೆ:ಬೆಂ.ಅ.ಪ್ರಾ/ಆಯುಕ್ತರು/ಅಸ/ಟಿ-224/2022-23 ದಿನಾಂಕ: 25.08.2022.

* * *

**ಪ್ರಸ್ತಾವನೆ:**

ಉಲ್ಲೇಖ (1) ರಲ್ಲಿ ಹೇಳಿರುವ ಸರ್ಕಾರದ ಅಧಿಸೂಚನೆಯಂತೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014ನ್ನು ಜಾರಿಗೆ ತರಲಾಗಿದ್ದು, ಸದರಿ ಅಧಿನಿಯಮದ ಪ್ರಕರಣ 10 ರಂತೆ ಪ್ರಾಧಿಕಾರವು ಕೆರೆಗಳ, ಕೊಳಗಳ, ಸರೋವರಗಳ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೂ ಯಾವುದೇ ಇತರ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಕೆರೆಗಳ, ಕೊಳಗಳ, ಸರೋವರಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವುದಕ್ಕಾಗಿ, ಯಾವೊಬ್ಬ ಅಧಿಕಾರಿಯನ್ನು ಜಿಲ್ಲಾವಾರು "ಹೆಸರಿಸಲಾದ ಅಧಿಕಾರಿ"ಯೆಂದು ಹೆಸರಿಸಬಹುದಾಗಿದೆ ಅಥವಾ ನೇಮಕ ಮಾಡಬಹುದಾಗಿರುತ್ತದೆ.

ಈ ಕುರಿತು ಉಲ್ಲೇಖ (2) ರ ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಕಕೆಸಂಅಪ್ರಾ/ನಿ/07/2018-19 ದಿನಾಂಕ : 24.07.2018 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಫರ್ದಿನಲ್ಲಿದ್ದ 33 ಕೆರೆಗಳಿಗೆ "ಹೆಸರಿಸಲಾದ ಅಧಿಕಾರಿಗಳನ್ನು" ನೇಮಿಸಿ ಅದೇಶ ಹೊರಡಿಸಲಾಗಿತ್ತು. ತದನಂತರ, ಉಲ್ಲೇಖ (3) ರ ಸರ್ಕಾರದ ಆದೇಶ ಸಂಖ್ಯೆ: ನಅಇ 39 ಬೆಂಅಸೇ 2019 ಬೆಂಗಳೂರು, ದಿನಾಂಕ : 11/12/2019 ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಫರ್ದಿನಲ್ಲಿದ್ದ 33 ಕೆರೆಗಳ ಪೈಕಿ, 28 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುಫರ್ದಿಗೆ ಹಸ್ತಾಂತರಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಉಲ್ಲೇಖ (4) ರ ಈ ಕಛೇರಿಯ ಪತ್ರದಲ್ಲಿ ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಫರ್ದಿನಲ್ಲಿರುವ 05 ಕೆರೆಗಳಿಗೆ ಹೊಸದಾಗಿ "ಹೆಸರಿಸಲಾದ ಅಧಿಕಾರಿಗಳನ್ನು" (Designated Officers) ನೇಮಿಸುವ ಬಗ್ಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಲು ಕೋರಲಾಗಿತ್ತು. ಅದರಂತೆ, ಉಲ್ಲೇಖ (5) ರಲ್ಲಿ ಅಭಿಯಂತರ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಪತ್ರ ಸಂಖ್ಯೆ:ಬೆಂ.ಅ.ಪ್ರಾ/ಆಯುಕ್ತರು/ಅಸ/ಟಿ-224/2022-23 ದಿನಾಂಕ:25.08.2022 ರಲ್ಲಿ "ಹೆಸರಿಸಲಾದ ಅಧಿಕಾರಿಗಳನ್ನು" (Designated Officers) ನೇಮಕ ಮಾಡಲು ಪ್ರಸ್ತಾವನೆ/ವಿವರಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

......2

ನೆಲ ಮಹಡಿ, ಬೀಜ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024.
ದೂರವಾಣಿ: 080-23513711/12, ಈಮೇಲ್-ktcda2018@gmail.com